(SRI H. M. CHANNABASAPPA)

(*b*) As this road is primarily intended for the benefit of Kudremukh Project and therefore formed a part of the project iteself Government is of the opinion that there is no justification in the State taking loan, and spending the money for the benefit of the project authorities.

(*c*) Yes.

(*d*) Does not arise in view of reply to clause (*b*).

ಶ್ರೀ ಎ. ಶಂಕರ ಆಳ್ವ.—ರಾಜ್ಯ ಸರಕಾರ ಈ ಕೆಲಸಕ್ಕೆ ಸಾಲ ಪಡೆದು ವೆಚ್ಚ ಮಾಡುವುದ ನ್ಯಾಯವಲ್ಲವೆಂದು ಯಾವಾಗ ತೀರ್ಮಾನಮಾಡಿತು ? ಹೀಗೆ ಮಾಡಲು ಕಾರಣವೇನು ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಉತ್ತರದಲ್ಲೇ ತಿಳಿಸಲಾಗಿದೆ.

ಶ್ರೀ ಎ. ಶಂಕರ ಆಳ್ವ.—ಸಾಲ ತೆಗೆದುಕೊಳ್ಳಬೇಕೆಂದು ಯಾವ ತಾರೀಖಿನಲ್ಲಿ ನಿರ್ಧಾರ ಮಾಡಲಾಗಿದೆ ?

Sri H. M. CHANNABASAPPA.—16-9-1972. Government of India in their letter communicating the approval of sanction to the loan, i. e. for 166·47 lakhs.

ಶ್ರೀ ಎ. ಶಂಕರ ಆಳ್ವ.—ಸಾಲ ತೆಗೆದುಕೊಳ್ಳುವುದಾಗಿ ಹೇಳಿದಾಗ ಕುದುರೆಮುಖ ಪ್ರಾಜೆಕ್ಟ್ ಜಾರಿಯಲ್ಲಿತ್ತು. ಆದುದರಿಂದಲೇ ಒಪ್ಪಿದ್ದು. ಈಗ ಇದು ಯೋಜನೆಯಲ್ಲಿ ಸೇರಬೇಕು, ಆದುದರಿಂದ ಸಾಲ ಬೇಡ ಎಂದು ತೀರ್ಮಾನಮಾಡಲು ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕುದುರೆಮುಖ ಯೋಜನೆ ಬಹಳ ದೊಡ್ಡ ಯೋಜನೆ. ಇದಕ್ಕೆ ಮೈಸೂರು ಸರಕಾರ ಸಾಲ ತೆಗೆದುಕೊಂಡು ಬಡ್ಡಿ ಕೊಡಲು ಸಾಧ್ಯವಿಲ್ಲ. ಇದು ಯೋಜನೆಯ ಒಂದು ಭಾಗ. ಆದುದರಿಂದಲೇ ಇದನ್ನು ಯೋಜನೆಯಲ್ಲೇ ಸೇರಿಸಬೇಕೆಂದು ಹೇಳಿದೆ.

PAYMENT OF WASHING ALLOWANCE TO THE STAFF OF POLICE DEPARTMENT

849. Sri D. B. KALMANKAR (Afzalpur).—

Will the Chief Minister be pleased to state :—

(*a*) whether the Government has paid washing allowance to Police Department since three years to the Constables to Inspectors Category ;

(*b*) if not, whether the Government propose to sanction the washing allowance ?

Sri H. M. CHANNABASAPPA (Minister for Public Works and Electricity) [On behalf of Sri D. DEVARAJ URS (Chief Minister)].—

(a) No.

(*b*) The matter is under examination.

Sri D. B KALMANKAR. – May I know the reason why that washing allowance was not paid to the staff of the Police Department since three years ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಇದಕ್ಕೆ ತುಕೋಳ್ ಕಮೀಷನ್ ಶಿಫಾರಸು ಮಾಡಿಲ್ಲ. ಆದುದರಿಂದ ಇದನ್ನು ನಿಲ್ಲಿಸಿತ್ತು. ಈಗ ಇದು ಅವಶ್ಯಕವೆಂದು ಕಂಡುಬಂದು ಪುನಃ ಇದನ್ನು ಕೊಡಬೇಕೆಂದು ಯೋಚನೆಮಾಡಲಾಗಿದೆ, ಶೀಘ್ರದಲ್ಲೇ ಇದರ ಬಗ್ಗೆ ಆಜ್ಞೆ ಮಾಡಲಾಗುವುದು.

2-00 P.M.

HEALTH CENTRE BUILDINGS AT ITTIGI AND HOLALU

857. Sri B. SATYANARAYANA SINGH (Hospet) —

Will the Minister for Public Works and Electricity be pleased to state :—

(*a*) whether Government is aware of the inconvenience and hardship caused to the patients and public due to non-completion of Health Centre buildings at Ittigi and Holalu for the last 8 years by the P.W.D., Bellary Division ;

(*b*) if so, the reasons for the same and the steps taken to complete the work of the buildings early ?

Sri H. M. CHANNABASAPPA (Minister for Public Works and Electricity) .—

(*a*) Yes.

(*b*) The delay is due to the failure of the contractors to complete the work entrusted to them. Efforts will however be made to complete the works, which are already taken up early and make available the buildings to the Public Health Department.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಕಂಟ್ರಾಕ್ಟರಿಗೆ ವಹಿಸಿದ ಕಾಮಗಾರಿಯನ್ನು ಅವರು ಪೂರ್ತಿಗೊಳಿಸದಿರುವುದು ಏಳುಬಕ್ಕೆ ಕಾರಣವಾಗಿದೆ ಎಂದು ಹೇಳಿದ್ದಾರೆ. ಹಾಗಿದ್ದರೆ ಅವರ ಕಂಟ್ರಾಕ್ಟನ್ನು ಕ್ಯಾನ್ಸಲ್ ಮಾಡಿ ಬೇರೆಯವರಿಗೆ ಏಕೆ ಕೊಡಲಿಲ್ಲ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಅನೇಕ ಕೆಲಸ ಉಳಿದಿವೆ. ಯಾವ ಕೆಲಸವೆಂದು ಹೇಳಿದರೆ ಉತ್ತರ ಕೊಡುತ್ತೇನೆ.

2-00 P. M.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಇಟಗಿಯಲ್ಲಿನ ಆರೋಗ್ಯ ಕೇಂದ್ರದ ಕಟ್ಟಡದ ಬಗ್ಗೆ ಕೇಳುತ್ತಿದ್ದೇನೆ. ಆ ಕೆಲಸ ಏಕೆ ಬೇರೆಯವರಿಗೆ ಕೊಡಲಿಲ್ಲವೆಂದು ಹೇಳುತ್ತಾರೆಯೆ ?